ಇಷ್ಟಿದ್ದರೂ, ಈ ರೇಟ್ ಏಕೆ ಜಾಸ್ತಿ ಮಾಡುತ್ತಿದ್ದೀರಿ ಎಂದು ಹೇಳಬೇಕಾಗುತ್ತದೆಯೇ ವಿನಾ demand is there.

ಶ್ರೀ ಎಸ್. ಸಿದ್ಧರಾಮಯ್ಯ : ನೀವು ಒಂದು ಮೀಟಿಂಗ್ ಮಾಡಿ.

ಶ್ರೀ ಆರ್.ವಿ. ದೇಶಪಾಂಡೆ : ಮೀಟಿಂಗ್ ಮಾಡಿ ಎಂದು ಅವರು ಹೇಳಿರುವುದು ಒಳ್ಳೆಯ ಸಲಹೆಯಾಗಿದೆ.

(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀ ಅಪ್ಪಾಜಿ ಎಸ್. ನಾಡಗೌಡರು ಮಾತನಾಡಲು ಎದ್ದು ನಿಂತರು)

ಉಪಾಧ್ಯಕ್ಷರು : ನಾಡಗೌಡರೆ, ಮಾನ್ಯ ಸದಸ್ಯರಾದ ಸಿಂಧ್ಯಾರವರು ಏನು ಕೇಳಿದ್ದಾರೆ, ಅದಕ್ಕೆ ಮೊದಲು ಉತ್ತರ ಕೊಡಲಿ. ನೀವು ಕುಳಿತುಕೊಳ್ಳಿ ಅವರು ಎಲ್ಲರಿಗೂ uniform ಆಗಿ ಹೇಳುತ್ತಾರೆ. ನಿಮಗೆ ಅದರಲ್ಲಿ separate ಆಗಿ ಇದೆಯೇ? ಎಲ್ಲರಿಗೂ ಒಂದೇ ತರಹ apply ಆಗುವಂತೆ ಹೇಳುತ್ತಿದ್ದಾರಲ್ಲ. ಸಿಮೆಂಟ್‌ಗೆ ಒಂದೊಂದು ಊರಿನಲ್ಲಿ ಒಂದೊಂದು ರೇಟ್ ಇದೆಯೇ?

ಶ್ರೀ ಅಪ್ಪಾಜಿ ಎಸ್. ನಾಡಗೌಡ : ಕಳಪೆ ಸಿಮೆಂಟ್ ಬರುತ್ತಿದೆ, ಬ್ಯಾಗ್ ತೆಗೆದು ಪುನಃ ಅದರೊಳಗೆ ಬೂದಿಯನ್ನು ಬೆರೆಸಿ ಪುನಃ pack ಮಾಡಿ ವಿತರಿಸುತ್ತಿದ್ದಾರೆ.

ಶ್ರೀ ಹೆಚ್.ಡಿ. ಬಸವರಾಜು : ಮಾನ್ಯ ಉಪಾಧ್ಯಕ್ಷರೆ, ಒಂದು ವಿಷಯವನ್ನು ಇಲ್ಲಿ ಪ್ರಸ್ತಾಪ ಮಾಡುವುದಕ್ಕೆ ತಾವು ಅನುಮತಿ ಕೊಡಬೇಕೆಂದು ನಾನು ಬಹಳ ಸಮಯದಿಂದ ಕೇಳುತ್ತಿದ್ದೇನೆ. 4-5 ದಿವಸಗಳಾಗಿದೆ.

ಉಪಾಧ್ಯಕ್ಷರು : ಬಸವರಾಜುರವರೆ, ನಿಮ್ಮ ಪ್ರಶ್ನೆ ಯಾವುದೆಂದು ನನಗೆ ಅರ್ಥವಾಗಲಿಲ್ಲ. ಒಂದು ನಿಮಿಷ.

ಶ್ರೀ ಗೋವಿಂದ ಎಂ. ಕಾರಜೋಳ : ಎಲ್ಲಾ ಕಾರ್ಖಾನೆಗಳ ಮಾಲೀಕರ ಸಭೆ ಕರೆದು ಚರ್ಚಿಸುತ್ತೇವೆ.

10) ವಿಷಯ : ಡಂಬಳದಲ್ಲಿ ಪೋಲೀಸ್ ಠಾಣೆ : ಹರಳಾಪುರ ಗ್ರಾಮದ ಹತ್ತಿರ ಹೊಸಕೆರೆ ನಿರ್ಮಿಸುವ ಬಗ್ಗೆ –

ಶ್ರೀ ಎಸ್.ಎಸ್. ಪಾಟೀಲ್ (ಮುಂಡರಗಿ) : ಡಂಬಳದಲ್ಲಿ ಪೊಲೀಸ್ ಠಾಣೆ ಸ್ಥಾಪಿಸುವುದರ ಬಗ್ಗೆ ಶೂನ್ಯ ವೇಳೆಯಲ್ಲಿ ಕೇಳಿದ್ದೆ. ತಾವು ಈಗ ಸದನದಲ್ಲಿ ಇರುವುದರಿಂದ ಎರಡಕ್ಕೂ ಉತ್ತರಿಸಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್ (ಗೃಹ ಹಾಗೂ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಸನ್ಮಾನ್ಯ ಅಧ್ಯಕ್ಷರೇ, ಮುಂಡರಗಿ ಮತಕ್ಷೇತ್ರಕ್ಕೆ ಸೇರಿದ ಗದಗ ತಾಲ್ಲೂಕು ಹರಳಾಪುರ ಗ್ರಾಮದ ಹತ್ತಿರ ಹೊಸಕೆರೆಯನ್ನು ನಿರ್ಮಿಸುವ

ಸಲುವಾಗಿ ಈ ಹಿಂದೆ ಪ್ರಸ್ತಾವನೆ ನಬಾರ್ಡ್‌ಗೆ ಹೋಗಿದ್ದು, ಸದರೆ ಕೆರೆಯ ನಿರ್ಮಾಣ ಕಾಮಗಾರಿಯನ್ನು ಪ್ರಾರಂಭಿಸಲಾಗಿರುವುದಿಲ್ಲ. ಅದರಿಂದಾಗಿ, ಈ ಕೆರೆಯ ನಿರ್ಮಾಣ ಕಾಮಗಾರಿಯನ್ನು ಯಾವುದಾದರೂ ಯೋಜನೆಯಲ್ಲಿ ಕೈಗೆತ್ತಿಕೊಳ್ಳಬೇಕೆಂದು ಕೇಳಿದ್ದೀರಿ. ಗದಗ ಜಿಲ್ಲೆ ಮುಂಡರಗಿ ತಾಲ್ಲೂಕಿನ ಹರಳಾಪುರ ಗ್ರಾಮದ ಹತ್ತಿರ ಹೊಸ ಇಂಗು ಕೆರೆ ನಿರ್ಮಾಣ ಕಾಮಗಾರಿಯ ರೂ. 80 ಲಕ್ಷ ಮೊತ್ತದ ವಿವರವಾದ ಅಂದಾಜು ಪತ್ರಿಕೆಯನ್ನು ನಬಾರ್ಡ್ ಸಹಾಯಧನ RIDF-11 ರಡಿ ಕೈಗೊಳ್ಳಲು ಮಂಜೂರಾತಿಗಾಗಿ ನಬಾರ್ಡ್‌ಗೆ ಸಲ್ಲಿಸಲಾಗಿತ್ತು. ನಬಾರ್ಡ್ ಸಹಾಯಧನ ನಿರೀಕ್ಷಿಸಿ ಈ ಕಾಮಗಾರಿಯನ್ನು 2006–07ನೇ ಸಾಲಿನ ಆಯವ್ಯಯದಲ್ಲಿ ಸೇರಿಸಲಾಗಿತ್ತು. ಆದರೆ, ನಬಾರ್ಡ್ ಸಹಾಯಧನ ದೊರಕದ ಕಾರಣ ಕಾಮಗಾರಿಯನ್ನು ಕೈಬಿಡಲಾಗಿತ್ತು. ಪ್ರಸ್ತುತ ಸಾಲಿನ ಪೂರಕ ಅನುದಾನದಲ್ಲಿ ಈ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲು ಪರಿಶೀಲಿಸುತ್ತಿದ್ದೇವೆ. ಹಾಗೆಯೇ, ಡಂಬಳದಲ್ಲಿ ಪೊಲೀಸ್ ಠಾಣೆ ಸ್ಥಾಪಿಸುವ ವಿಚಾರದಲ್ಲಿ ಮಾನ್ಯ ಹಿರಿಯ ಸದಸ್ಯರು ಪ್ರಸ್ತಾಪಿಸಿದ್ದಾರೆ. ಈ ವರ್ಷದ ಆಯವ್ಯಯದಲ್ಲಿ ಅದನ್ನು ಸೇರಿಸಿ ಕ್ರಮ ಕೈಗೊಳ್ಳುತ್ತೇವೆಂಬ ಮಾತನ್ನು ಕೂಡ ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ.

ಶ್ರೀ ಎಸ್.ಎಸ್. ಪಾಟೀಲ್ : ಕೆರೆ ವಿಚಾರಕ್ಕೆ ಸಂಬಂಧಿಸಿದಂತೆ ಪರಿಶೀಲಿಸುತ್ತಿದ್ದೇವೆಂದು ಹೇಳಿದ್ದೀರಿ. ಬರೀ ಪರಿಶೀಲಿಸುವುದಲ್ಲ, ಅದನ್ನು ಪ್ರಾರಂಭ ಮಾಡುತ್ತೇವೆಂಬುದನ್ನು ದಯವಿಟ್ಟು ಹೇಳಬೇಕು.

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ಉಪ ಮುಖ್ಯಮಂತ್ರಿಗಳು ಅದರ ಜವಾಬ್ದಾರಿಯನ್ನು ನೋಡಿಕೊಳ್ಳುತ್ತಿದ್ದಾರೆ. ಪರಿಶೀಲಿಸುತ್ತೇವೆಂದರೆ, ಖಂಡಿತವಾಗಿಯೂ ಮಾಡುತ್ತೇವೆ ಎನ್ನುವ ರೀತಿಯಲ್ಲೇ ಅವರಿಗೆ ಹೇಳಿದ್ದಾರೆ. ಅವರು ಬಂದ ಮೇಲೆ ಬೇಕಾದರೆ ತಮಗೆ ಹೇಳುತ್ತಾರೆ. ಜೆ.ಹೆಚ್.ಪಟೇಲರು ಹೇಳಿದರಲ್ಲ, it is under consideration ಎಂದರೆ, file is available ಎಂದು. It is under active consideration ಎಂದರೆ, file is not available ಎಂದು.

11) ವಿಷಯ : ಪೌರ ಸೇವಾ ಮುಷ್ಕರದ ಬಗ್ಗೆ :

ಶ್ರೀ ಆರ್. ಶ್ರೀನಿವಾಸ್ (ಮಾನ್ಯ ಪೌರಾಡಳಿತ ಸಚಿವರು) : ಸನ್ಮಾನ್ಯ ಉಪಾಧ್ಯಕ್ಷರೇ, ಈ ಸದನದ ಮುಖಾಂತರ ನನ್ನ ಹೇಳಿಕೆ ಕೊಡಬಯಸುತ್ತೇನೆ.

ರಾಜ್ಯಾದ್ಯಾಂತ ಕರ್ನಾಟಕ ಪೌರ ಸೇವಾ ನೌಕರರು ಮುಷ್ಕರ ನಿರತರಾಗಿರುವುದು ತಮಗೆ ತಿಳಿದಿದೆ. ಈ ಬಗ್ಗೆ ದಿನಾಂಕ 06–07–2007 ಮತ್ತು 18–07–2007 ರಂದು ಕರ್ನಾಟಕ ಪೌರ ಸೇವಾ ನೌಕರರ ಸಂಘದ ಪದಾಧಿಕಾರಿಗಳ ಜೊತೆಯಲ್ಲಿ ಎರಡು ಸುತ್ತಿನ ಔಪಚಾರಿಕ ಸಭೆಯನ್ನು ನನ್ನ ಅಧ್ಯಕ್ಷತೆಯಲ್ಲಿ ಕರೆದು ಇಲಾಖೆಯ ಅಧಿಕಾರಿಗಳೊಂದಿಗೂ ಸಹ ಸಮಾಲೋಚಿಸಿ